ಇವರಿಗೆ,
ಸಂಘಗಳ ಜಿಲ್ಲಾ ನೊಂದಣಾಧಿಕಾರಿಗಳ ಕಛೇರಿ,
ಸಹಕಾರ ಆಡಳಿತ ಭವನ, ಜಕ್ಕೇರಿ ಹೊಂಡಾ,
ಬೆಳಗಾವಿ ಜಿಲ್ಲೆ, ಬೆಳಗಾವಿ.

ವಿಷಯ:- ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್.

1st ಫ್ಲೋರ್, ಆಫೀಸ್ ಆಫ್ ದಿ ಡೈರೆಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಪ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್, ನೆಹರು ನಗರ, ಬೆಳಗಾವಿ. ಈ ಸಂಘದ ನೊಂದಣಿ ಮಾಡುವ ಕುರಿತು.

ಮಾನ್ಯರೆ,

ನಾವು ಕರ್ನಾಟಕ ಸಂಘಗಳ ನೊಂದಣಿ ಖಾಯ್ದೆ 1960ರ ಮೇರೆಗೆ ಮೇಲೆ ನಮೂದಿಸಿದ ಸಂಘವನ್ನು ನೊಂದಾಯಿಸಲು, ನಿವೇದನ ಪತ್ರಿಕೆ ಮತ್ತು ನಿಬಂಧನೆಗಳನ್ನು ಮತ್ತು ನೊಂದಣಿ ಶುಲ್ಕ ಇರಿಸಿದ್ದೇವೆ ಮತ್ತು ಸಂಘವನ್ನು ನೊಂದಣಿ ಮಾಡಿಕೊಳ್ಳಲು ಕೇಳಿಕೊಳ್ಳುತ್ತೇವೆ.

ಸ್ಥಳ: ಬೆಳಗಾವಿ

ದಿನಾಂಕ: 27/11/2020

| ನಂ | ಹೆಸರು | ಹುದ್ದೆ | ಸಹಿ |
|---|---|---|---|
| 1. | ಡಾ. ಕೋತಿವಾಲೆ ವೀರಪ್ಪ ಅಣ್ಣಾಸಾಹೇಬ | ಅಧ್ಯಕ್ಷರು | |
| 2. | ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ | ಉಪಾಧ್ಯಕ್ಷರು | |
| 3. | ಡಾ. ರಂಜಿತ ಕಾಂಗಲೆ | ಕಾರ್ಯದರ್ಶಿ | |
| 4. | ಡಾ. ಬಸವರಾಜ ಶಶಿಧರ ಮೊತಿಮಠ | ಖಜಾಂಚಿ | |
| 5. | ಡಾ. ಅಶೋಕ ಮಲ್ಲಪ್ಪ ಕಮತ | ಸದಸ್ಯರು | |
| 6. | ಡಾ. ಅಪೇಕ್ಷಾ ಅಶೋಕ ಪೂಜಾರ | ಸದಸ್ಯರು | |
| 7. | ಡಾ. ಅರುಣ ಮಲ್ಲಿಕಾರ್ಜುನ ಚೌಗಲೆ | ಸದಸ್ಯರು | |
| 8. | ಡಾ. ಹಸನ್ ಪಾಶಾ ಎನ್. ಶೋಲಾಪುರ್ | ಸದಸ್ಯರು | |
| 9. | ಶ್ರೀ. ಸುಜೀತ ಕುಮಾರ ರಾಮ ಪ್ರೀತ ಶರ್ಮಾ | ಸದಸ್ಯರು | Sujeet Kumar |
| 10. | ಡಾ. ಪ್ರಶಾಂತ ಅಣ್ಣಪ್ಪ ಕರಣಿ | ಸದಸ್ಯರು | |
| 11. | ಡಾ. ಮುಕುಂದ ಅನಂತ ಉಡಚಣಕರ | ಸದಸ್ಯರು | |

## ಸಂಘಗಳ ನೋಂದಣಿ ಬಗ್ಗೆ ಪ್ರಸ್ತಾವಣೆ ಚೆಕ್–ಲಿಸ್ಟ್

| | | |
|---|---|---|
| 1) | ಸಂಘದ ಹೆಸರು : | ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್. |
| 2) | ಸಂಘದ ವಿಳಾಸ : | 1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ. |
| 2)ಎ | ವಿಧಾನ ಸಭಾ ಕ್ಷೇತ್ರದ ಹೆಸರು, ವಾರ್ಡ ಸಂಖ್ಯೆ | ಬೆಳಗಾವಿ ಮತಕ್ಷೇತ್ರ, ವಾರ್ಡ ನಂ: 43 |
| 3) | ಸಂಘ ರಚನೆ ಮಾಡಲು ಮೊದಲು ಬಾರಿಯ ಸಭೆಯ ನಡವಳಿ ಲಗತ್ತಿಸಿದೆಯೇ: | ಹೌದು ಲಗತ್ತಿಸಿದೆ |
| 4) | ಸಂಘದ ಪತ್ರ ಲಗತ್ತಿಸಿದೆಯೆ? (ಧ್ಯೇಯೋದ್ದೇಶಗಳು/ಬೈಲಾ) | ಹೌದು ಲಗತ್ತಿಸಿದೆ |
| | ಸೂಚನೆ: ಸಂಘದ ಹೆಸರು, ವಿಳಾಸ, ಸಂಘದ ಉದ್ದೇಶಗಳು ಮತ್ತು ಉದ್ದೇಶದಲ್ಲಿ ಸಂಘದ ಲಾಭಾಂಶವನ್ನು ಸಂಘದ ಸದಸ್ಯರಿಗೆ ಹಂಚದೇ ಸಂಘದ ಉದ್ದೇಶಕ್ಕಾಗಿ ಬಳಸಲಾಗುವುದೆಂದು ದೃಡೀಕರಣ ಇರಬೇಕು. ಸಂಘದ ವ್ಯವಹಾರದ ಅಧಿಕಾರ ಅಧ್ಯಕ್ಷರಿಗೆ/ಕಾರ್ಯದರ್ಶಿಗೆ ಎಂದು ಸ್ಪಷ್ಟವಾಗಿ ನಮೋದಿಸಿರಬೇಕು ಕಾಯ್ದೆ ಕಲಂ 3 ರ ರೀತ್ಯಾ ನೊಂದಣಿಗೆ ಅರ್ಹತೆ ಹೊಂದಿರಬೇಕು ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರು ಜ್ಞಾಪನಾ ಪತ್ರದಲ್ಲಿ ಸಹಿ ಮಾಡಿರಬೇಕು. ಒಂದು ಬದಿಯಲ್ಲಿ ಬೆರಳಚ್ಚು ಮಾಡಬೇಕು. | |
| 5) | ಕಾರ್ಯಕಾರಿ ಸಮಿತಿ ಪಟ್ಟಿ ಲಗತ್ತಿಸಬೇಕು. (ಎರಡು ಪ್ರತಿ) (ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಸಹಿ ಮಾಡಿರಬೇಕು) ಸೂಚನೆ: ಹೆಸರು, ವಿಳಾಸ, ವಯಸ್ಸು, ಉದ್ಯೋಗ, ಸಂಘದಲ್ಲಿ ಪದವಿ, ಭಾವಚಿತ್ರ ಮತ್ತು ಸಹಿ ಹಾಕಿರಬೇಕು, ಸದಸ್ಯರಲ್ಲದವರು ಇಬ್ಬರು ಸಾಕ್ಷಿ ಸಹಿ ಹಾಕಿರಬೇಕು. | |
| 6) | ಸಂಘದ ನಿಯಮ ಮತ್ತು ನಿಬಂಧನೆಗಳನ್ನು ಲಗತ್ತಿಸಿದೆಯೆ? | ಹೌದು ಲಗತ್ತಿಸಿದೆ |
| | 1. ಸಂಘದ ಸದಸ್ಯತ್ವ | ಹೌದು ಲಗತ್ತಿಸಿದೆ |
| | 2. ಸಂಘದ ಸದಸ್ಯತ್ವ ವರ್ಗ | |
| | 3. ಸದಸ್ಯತ್ವ ಅರ್ಜಿ (ಅರ್ಹತೆ) | |
| | 4. ಸದಸ್ಯರ ಹಕ್ಕು ಬಾಧ್ಯತೆಗಳು | |
| | 5. ಸದಸ್ಯತ್ವ ನಿಂತು ಹೋಗುವುದು | |
| | 6. ಸದಸ್ಯತ್ವದ ಸಹಿ | |
| | 7. ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಆಯ್ಕೆ | ಹೌದು ಲಗತ್ತಿಸಿದೆ |
| | 8. ಅವಶ್ಯಕ ಕೋರಂ | |
| | 9. ಲೆಕ್ಕ ಪತ್ರಗಳು ಮತ್ತು ಹಣಕಾಸು ವರ್ಷ | |
| | 10. ನಿಬಂಧನೆಗಳ ತಿದ್ದುಪಡಿ | |
| | 11. ಕಾರ್ಯಾವಧಿ | |
| | 12. ಸದಸ್ಯರಿಗೆ ನೋಟಿಸ್ (ಸೂಚನೆ) | |
| | 13. ಸರ್ವ ಸದಸ್ಯರ ಸಭೆಯ ಕೋರಂ | |
| | 14. ಸರ್ವ ಸದಸ್ಯರ ಸಭೆಯ ಅವಧಿ | |
| | 15. ಸರ್ವ ಸದಸ್ಯರ ಸಭೆಯ ಅವಧಿ ಸದಸ್ಯರುಗಳಿಗೆ ಮತದಾನದ ಮತ್ತು ಚುನಾವಣೆ ಸ್ಪರ್ದಿಸುವ ಹಕ್ಕು | |
| | 16. ವಿಶೇಷ ಸರ್ವ ಸದಸ್ಯರ ಸಭೆ | |
| | 17. ನಿಬಂಧನೆಗಳ ತದ್ದುಪಡಿ | |
| | 18. ಸಂಘದ ವಿಸರ್ಜನೆ | |
| | 19. ಸಂಘದ ಸಂಯೋಜನೆ | |
| | 20. ಸಂಘದ ಪದಾಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು | ಹೌದು ಲಗತ್ತಿಸಿದೆ |
| | – ಅಧ್ಯಕ್ಷರು | |
| | – ಉಪಾಧ್ಯಕ್ಷರು | |
| | – ಕಾರ್ಯದರ್ಶಿ | |
| | – ಖಜಾಂಚಿ | |
| | – 20 ರೂ ಪ್ರಮಾಣ ಪತ್ರ | |
| | – ವಿಳಾಸದ ಬಗ್ಗೆ ದೃಡೀಕರಣ | |
| | – ಬಾಡಿಗೆ ಕರಾರು ಪತ್ರ | |
| | ಎಲ್ಲಾ ಪ್ರಸ್ತಾವಣೆಗಳು ಕನ್ನಡದಲ್ಲಿ ಇರತಕ್ಕದ್ದು | |

ಕ್ರಮ ಸಂಖ್ಯೆ 1 ರಿಂದ 20 ರ ವರೆಗೆ ಸ್ಪಷ್ಟವಾಗಿ ಹಾಗೂ ವಿವರವಾಗಿ ನಿಬಂಧನೆಗಳನ್ನು ನಮೂದಿಸಬೇಕು.

ಸಂಘದ ಅಧ್ಯಕ್ಷರು/ಕಾರ್ಯದರ್ಶಿ

**ಪರಿಶೀಲನೆ**

ವಿಷಯ ನಿರ್ವಾಹಕರು
ಸಂಘಗಳ ನೋಂದಣಾಧಿಕಾರಿಗಳ ಕಛೇರಿ
ಬೆಳಗಾವಿ

# ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್.

## 1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಪ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ.

### ಪ್ರಥಮ ಸರ್ವಸಾಧಾರಣ ಸಭೆ

ದಿನಾಂಕ: 25/10/2020 ಸಮಯ: ಬೆಳಿಗ್ಗೆ 10–00 ಸ್ಥಳ: ಸಂಘದ ಕಛೇರಿ

ಈ ಹೊತ್ತು ನಡೆದ ಸಂಘದ ಪ್ರಥಮ ಸರ್ವಸಾಧಾರಣಾ ಸಭೆಯಲ್ಲಿ ಎಲ್ಲ ಸದಸ್ಯರು ಹಾಜರಿದ್ದು ಸಭೆ ಪ್ರಾರಂಭವಾಗಿ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸಿ ಠರಾವ ಸರ್ವಾನುಮತದಿಂದ ಪಾಸ ಮಾಡಲಾಯಿತು.

**ವಿಷಯ ನಂ.1:ಸಭೆಗೆ ಅಧ್ಯಕ್ಷರನ್ನು ಆರಿಸುವ ವಿಷಯದ ಕುರಿತು.**

ಠರಾವು ನಂ.1:ಈ ಹೊತ್ತು ನಡೆದ ಪ್ರಥಮ ಸಭೆಯಲ್ಲಿ ಸಂಘದ ನೋಂದಣಿ ವಿಷಯದ ಬಗ್ಗೆ ಚರ್ಚಿಸುವ ವಿಷಯಗಳನ್ನು ವಿಕ್ಷೀಸಲು ಸಭೆಯ ಅಧ್ಯಕ್ಷರನ್ನಾಗಿ ಡಾ. ಕೋಶಿವಾಲೆ ವೀರಪ್ಪ ಅಣ್ಣಾಸಾಹೇಬ ಇವರನ್ನು ಆಯ್ಕೆ ಮಾಡಿ ಠರಾವ ಸರ್ವಾನುಮತದಿಂದ ಪಾಸ ಮಾಡಲಾಯಿತು.

ಸೂಚಕರು : ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ
ಅನುಮೋದಕರು : ಡಾ. ರಂಜಿತ ಕಾಂಗಲೆ

**ವಿಷಯ ನಂ.2:ಸಂಘಕ್ಕೆ ನಾಮಕರಣವನ್ನು ಮಾಡುವ ಕುರಿತು.**

ಠರಾವು ನಂ.2:ಈ ಹೊತ್ತು ನಡೆದ ಪ್ರಥಮ ಸಭೆಯಲ್ಲಿ ಚರ್ಚಿಸಿ ಸ್ಥಾಪಿಸಿದ ಸಂಸ್ಥೆಗೆ ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್. 1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಪ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ. ಅಂತಾ ನಾಮಕರಣ ಮಾಡಲಾಯಿತು ಹಾಗೂ ಸದರಿ ಠರಾವ ಸರ್ವಾನುಮತದಿಂದ ಪಾಸ ಮಾಡಲಾಯಿತು.

ಸೂಚಕರು : ಡಾ. ಬಸವರಾಜ ಶಶಿಧರ ಮೊತಿಮಠ
ಅನುಮೋದಕರು : ಡಾ. ಅಶೋಕ ಮಲ್ಲಪ್ಪ ಕಮತ

**ವಿಷಯ ನಂ.3: ಸಂಘಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಕುರಿತು.**

ಠರಾವು ನಂ.3: ಈ ಹೊತ್ತು ನಡೆದ ಪ್ರಥಮ ಸಭೆಯಲ್ಲಿ ಚರ್ಚಿಸಿ ಸಂಘಕ್ಕೆ ಅಧ್ಯಕ್ಷರೆಂದು ಡಾ. ಕೋಶಿವಾಲೆ ವೀರಪ್ಪ ಅಣ್ಣಾಸಾಹೇಬ, ಉಪಾಧ್ಯಕ್ಷರೆಂದು ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ, ಪ್ರಧಾನ ಕಾರ್ಯದರ್ಶಿಯವರೆಂದು ಡಾ. ರಂಜಿತ ಕಾಂಗಲೆ, [illegible] ಖಜಾಂಚಿಯೆಂದು ಡಾ. ಬಸವರಾಜ ಶಶಿಧರ ಮೊತಿಮಠ. ಇವರನ್ನು ಸಂಘದ ಪದಾಧಿಕಾರಿಗಳೆಂದು ಆಯ್ಕೆ ಮಾಡಿ ಎಲ್ಲರ ಅಪ್ಪಣೆ ಮೇರೆ ಠರಾವು ಸರ್ವಾನುಮತದಿಂದ ಪಾಸ ಮಾಡಲಾಯಿತು.

ಸೂಚಕರು : ಶ್ರೀ. ಸುಚೇತ ಕುಮಾರ ರಾಮ ಪ್ರೀತ ಶರ್ಮಾ
ಅನುಮೋದಕರು : ಡಾ. ಹಸನ್ ಪಾಶಾ ಎನ್. ಶೋಲಾಪುರ್

**ವಿಷಯ ನಂ.4: ಸಂಘದ ನೋಂದಣಿ ಮಾಡಲು ಅಧಿಕಾರವನ್ನು ಕೊಡುವ ಕುರಿತು.**

ಠರಾವು ನಂ.4: ಈ ಹೊತ್ತು ನಡೆದ ಪ್ರಥಮ ಸಭೆಯಲ್ಲಿ ಎಲ್ಲ ಸದಸ್ಯರು ಸೇರಿ ಸಭೆಯಲ್ಲಿ ಚರ್ಚಿಸಿ ಸಂಘವನ್ನು ಮೇ॥ ಜಿಲ್ಲಾ ನೊಂದಣಾಧಿಕಾರಿಗಳು ಮತ್ತು ಸಹಕಾರಿ ಸಂಘಗಳ ಉಪನಿಬಂಧಕರು ಬೆಳಗಾವಿ ಇವರಲ್ಲಿ ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್. 1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಪ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ. ಇದರ ನೊಂದಣಿ ಹಾಗೂ ಪತ್ರ ವ್ಯವಹಾರ ಮಾಡಲು ಸಂಘದ ಅಧ್ಯಕ್ಷರಾದ ಡಾ. ಕೋಶಿವಾಲೆ ವೀರಪ್ಪ ಅಣ್ಣಾಸಾಹೇಬ ಹಾಗೂ ಕಾರ್ಯದರ್ಶಿಯವರಾದ ಡಾ. ರಂಜಿತ ಕಾಂಗಲೆ ಇವರಿಗೆ ಅಧಿಕಾರ ನೀಡಿ ಠರಾವ ಸರ್ವಾನುಮತದಿಂದ ಪಾಸ ಮಾಡಲಾಯಿತು.

ಸೂಚಕರು : ಡಾ. ಪ್ರಶಾಂತ ಅಣ್ಣಪ್ಪ ಕರಣಿ
ಅನುಮೋದಕರು : ಡಾ. ಮುಕುಂದ ಅನಂತ ಉಡಚಣಕರ

ವಿಷಯ ನಂ.5: ಸಂಘದ ಬಾಯಲಾದಲ್ಲಿಯ ನಿವೇದನೆ ಪತ್ರಿಕೆ ಹಾಗೂ ನಿಬಂಧನೆಗಳ ಅನುಮೋದನೆ ಹಾಗೂ ಮಂಜೂರು ಮಾಡುವ ಕುರಿತು.

ಠರಾವು ನಂ.5: ಈ ಹೊತ್ತು ನಡೆದ ಪ್ರಥಮ ಸಭೆಯಲ್ಲಿ ಹೊಸದಾಗಿ ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್. 1st ಫ್ಲೋರ್, ಆಫೀಸ್ ಆಫ್ ದಿ ಡೈರೆಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಅಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ. ಗೆ ಸಂಬಂಧಿಸಿದಂತೆ ರಚಿಸಿದ ಬಾಯಲಾ ನಿವೇದನಾ ಪತ್ರಿಕೆ ಹಾಗೂ ನಿಬಂಧನೆಗಳು (ನಿಯಮಾವಳಿ) ಗಳನ್ನು ಹಾಜರಿದ್ದ ಸದಸ್ಯರ ಸಮಕ್ಷಮ ಓದಲಾಯಿತು ಹಾಗೂ ಸದರಿ ನಿವೇದನಾ ಪತ್ರಿಕೆ ಹಾಗೂ ನಿಬಂಧನೆಗಳನ್ನು ಅನುಮೋದಿಸಿ ಎಲ್ಲ ಒಪ್ಪಿಗೆಯನ್ನು ಪಡೆದುಕೊಂಡು ದೃಢೀಕರಿಸಲಾಯಿತು ಹಾಗೂ ಮಂಜೂರು ನೀಡಿ ಠರಾವ ಸರ್ವಾನುಮತದಿಂದ ಪಾಸ ಮಾಡಲಾಯಿತು.

ಸೂಚಕರು : ಡಾ. ಅರುಣ ಮಲ್ಲಿಕಾರ್ಜುನ ಚೌಗಲೆ
ಅನುಮೋದಕರು : ಡಾ. ಅಪೇಕ್ಷಾ ಅಶೋಕ ಪೂಜಾರ

| ನಂ | ಹೆಸರು | ಹುದ್ದೆ | ಸಹಿ |
|---|---|---|---|
| 1. | ಡಾ. ಕೋರಿವಾಲೆ ವೀರಪ್ಪ ಅಣ್ಣಾಸಾಹೇಬ | ಅಧ್ಯಕ್ಷರು | |
| 2. | ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ | ಉಪಾಧ್ಯಕ್ಷರು | |
| 3. | ಡಾ. ರಂಜಿತ ಕಾಂಗಲೆ | ಕಾರ್ಯದರ್ಶಿ | |
| 4. | ಡಾ. ಬಸವರಾಜ ಶಶಿಧರ ಮೊತಿಮಠ | ಖಜಾಂಚಿ | |
| 5. | ಡಾ. ಅಶೋಕ ಮಲ್ಲಪ್ಪ ಕಮತ | ಸದಸ್ಯರು | |
| 6. | ಡಾ. ಅಪೇಕ್ಷಾ ಅಶೋಕ ಪೂಜಾರ | ಸದಸ್ಯರು | |
| 7. | ಡಾ. ಅರುಣ ಮಲ್ಲಿಕಾರ್ಜುನ ಚೌಗಲೆ | ಸದಸ್ಯರು | |
| 8. | ಡಾ. ಹಸನ್ ಪಾಶಾ ಎನ್. ಶೋಲಾಪುರ್ | ಸದಸ್ಯರು | |
| 9. | ಶ್ರೀ. ಸುಜೀತ ಕುಮಾರ ರಾಮ ಪ್ರೀತ ಶರ್ಮಾ | ಸದಸ್ಯರು | Sujeet Kumar |
| 10 | ಡಾ. ಪ್ರಶಾಂತ ಅಣ್ಣಪ್ಪ ಕರಣಿ | ಸದಸ್ಯರು | |
| 11 | ಡಾ. ಮುಕುಂದ ಅನಂತ ಉಡಚಣಕರ | ಸದಸ್ಯರು | |

# ನಿವೇದನೆ ಪತ್ರಿಕೆ

1. ಸಂಘದ ಹೆಸರು ಮತ್ತು ವಿಳಾಸ : ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್. 1st ಫ್ಲೋರ್, ಆಫೀಸ್ ಆಫ್ ದಿ ಡೈರೆಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ.

2. ವಿಧಾನಸಭಾ ಕ್ಷೇತ್ರ : ಮತಕ್ಷೇತ್ರ, ವಾರ್ಡ ನಂ.

3. ಸಂಘದ ಕಾರ್ಯಕ್ಷೇತ್ರ : ಕರ್ನಾಟಕ ರಾಜ್ಯದಾದ್ಯಂತ.

4. ಸಂಘದ ಉದ್ದೇಶಗಳು : ಸಂಘದ ಉದ್ದೇಶಗಳು ಈ ಕೆಳಗಿನಂತಿವೆ.

1. ಬೆಳಗಾವಿಯ ಕೆ. ಎಲ್. ಇ. ವಿಶ್ವವಿದ್ಯಾಲಯದ ಎಲ್ಲಾ ಅಂಗ ಸಂಸ್ಥೆಗಳಲ್ಲಿ ಉತ್ತೀರ್ಣರಾದ ಎಲ್ಲಾ ಸದಸ್ಯ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಗೆ ತಂದು ಅವರ ಅನುಭವ ಮತ್ತು ಪ್ರತಿಭೆಯನ್ನು ವ್ಯಕ್ತಪಡಿಸಲು ಅನುವು ಮಾಡಿಕೊಡುವುದು.
2. ಶೈಕ್ಷಣಿಕ ಚಟುವಟಿಕೆಗಳಾದ ಸೆಮಿನಾರ್‌ಗಳು, ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ದತ್ತಿ ಉಪನ್ಯಾಸಗಳನ್ನು ಏರ್ಪಡಿಸುವುದು.
3. ತಮ್ಮ ಅಧ್ಯಯನದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪ್ರಸ್ತುತಪಡಿಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಬಹುಮಾನ ಮತ್ತು ಪದಕಗಳನ್ನು ನೀಡಲು, ಹಳೆಯ ವಿದ್ಯಾರ್ಥಿಗಳ ದತ್ತಿಯನ್ನು ಸ್ಥಾಪಿಸುವುದು ಮತ್ತು ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳನ್ನು ಗೌರವಿಸುವುದು.
4. ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಾಧನೆ ಚಟುವಟಿಕೆಗಳನ್ನು ನಿಯತಕಾಲಿಕೆಗಳಲ್ಲಿ, ಸ್ಮಾರಕಗಳಲ್ಲಿ ಮತ್ತು ಸುದ್ದಿಪತ್ರಗಳಲ್ಲಿ ಹೊರತರುವುದು.
5. ಹಳೆಯ ವಿದ್ಯಾರ್ಥಿಗಳಿಗೆ ತಮ್ಮ ಕೆಲಸ ಮತ್ತು ವಾಸ್ತವಿಕ ಜೀವನದಲ್ಲಿ ಎದುರಾಗಬಹುದಾದ ವಿವಿಧ ತಾಂತ್ರಿಕ ಸಮಸ್ಯೆಗಳು ಮತ್ತು ಉದ್ಯೋಗಾವಕಾಶಗಳ ಬಗ್ಗೆ ವಿಶ್ವವಿದ್ಯಾಲಯದಿಂದ ಸಲಹೆ ಪಡೆಯಲು ಸಹಾಯ ಮಾಡುವುದು.
6. ಹಳೆಯ ವಿದ್ಯಾರ್ಥಿಗಳು ತಮ್ಮ ಉದ್ಯಮದ ಅನುಭವ ಮತ್ತು ಪರಿಣತಿಯನ್ನು ಪ್ರಸ್ತುತ ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲು ಮತ್ತು ಲಾಭದಾಯಕ ಉದ್ಯೋಗ ಮತ್ತು ವೃತ್ತಿ ಭವಿಷ್ಯದ ಕಡೆಗೆ ಮಾರ್ಗದರ್ಶನ ನೀಡಲು ಒಂದು ವೇದಿಕೆಯನ್ನು ಕಲ್ಪಿಸಿಕೊಡುವುದು.
7. ಮೇಲಿನ ಉದ್ದೇಶಗಳನ್ನು ಪೂರೈಸಲು ಸಂಘದ ಸದಸ್ಯರು, ಸದಸ್ಯರಲ್ಲದವರು, ಸರ್ಕಾರಗಳು, ವಿಶ್ವವಿದ್ಯಾಲಯಗಳು ಇತರ ಸಂಸ್ಥೆಗಳು ಮತ್ತು ಲೋಕೋಪಕಾರಿಗಳಿಂದ ಚಂದಾದಾರಿಕೆ, ಕೊಡುಗೆಗಳು, ದೇಣಿಗೆ ಮತ್ತು ಉಡುಗೊರೆಗಳನ್ನು ಸಂಗ್ರಹಿಸುವುದು.
8. ಮೇಲಿನ ಉದ್ದೇಶಗಳು ಮತ್ತು ಉದ್ದೇಶಗಳನ್ನು ಉನ್ನತೀಕರಿಸಲು ಅಗತ್ಯವಾದ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು.
9. ವಿಶ್ವವಿದ್ಯಾಲಯದ ಹಾಲಿ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವುದು.
10. ವಿಶ್ವವಿದ್ಯಾಲಯದ ವಿಷಯಗಳ ಮಾಹಿತಿ, ತಂತ್ರಜ್ಞಾನವುಳ್ಳ ನಿಯತಕಾಲಿಕೆಗಳನ್ನು ಪ್ರಕಟಿಸುವುದು.
11. ನಿರುದ್ಯೋಗಿ ಪದವೀಧರರ ಆರ್ಥಿಕ ಸ್ವಾವಲಂಬನೆಗಾಗಿ ಮತ್ತು ಸ್ವಯಂ ಉದ್ಯೋಗ ಪ್ರಾರಂಭಿಸಲು ಪೂರಕವಾಗುವಂತಹ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು.
12. ಸದಸ್ಯರಿಗೆ ಶೈಕ್ಷಣಿಕ, ವೈಜ್ಞಾನಿಕ, ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಹಾಗೂ ಸರ್ವಾಂಗೀಣ ಉನ್ನತಿಗೆ ಶ್ರಮಿಸುವುದು.
13. ಸಂಸ್ಥೆಯ ಗುರಿ ಮತ್ತು ಉದ್ದೇಶಗಳ ಕಾರ್ಯಾಚರಣೆಗಳಿಗಾಗಿ ಆಧೀನ ಸಮಿತಿ ಉಪಸಮಿತಿ ಸಲಹಾ ಸಮಿತಿಗಳನ್ನು ರಚಿಸುವುದು ಅಥವಾ ವಿಸರ್ಜಿಸುವುದು.
14. ಸದಸ್ಯರಲ್ಲಿ ಆರ್ಥಿಕ ಸ್ವಾವಲಂಬನೆ ಮಿತವ್ಯಯ ಬಗ್ಗೆ ತಿಳುವಳಿಕೆ ನೀಡುವುದು.
15. ಸಂಘದ ಉದ್ದೇಶಗಳನ್ನು ಈಡೇರಿಸಲು ಸಂಘವು ವಿವಿಧ ಚಟುವಟಿಕೆಗಳಿಗಾಗಿ ವಂತಿಗೆ/ಅನುದಾನ ನೀಡಲು ಮತ್ತು ವಿವಿಧ ಮೂಲಗಳಿಂದ ವಂತಿಗೆ/ಅನುದಾನ ಪಡೆಯಲು, ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಲು ಮತ್ತು ಸಂಘದ ಬೆಳವಣಿಗೆ ಬಯಸುವ ಹಾಗೂ ಸಹಾಯಕವಾಗುವ ಬೇರೆ ಸಾರ್ವಜನಿಕ ಅಥವಾ ಖಾಸಗಿ ಸಂಘ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರವನ್ನು ಸಂಘವು ಹೊಂದಿರುತ್ತದೆ.

5. ಈ ಮೇಲಿನ ನಿವೇದನೆ ಪತ್ರಿಕೆಯಲ್ಲಿನ ಯಾವುದೇ ಶಬ್ದ/ವಾಕ್ಯವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಗೆ ವ್ಯತಿರಿಕ್ತವಾಗಿದ್ದಲ್ಲಿ ರದ್ದು ಎಂದು ತಿಳಿಯತಕ್ಕದ್ದು.

6. ಈ ಸಂಘದ ಆದಾಯವನ್ನು (ಅದು ಯಾವುದೇ ಮೂಲದಿಂದ ಬಂದಿದ್ದರೂ) ಅದನ್ನು ಸದಸ್ಯರಾಗಲಿ ಅಥವಾ ಬೇರೆಯವರಾಗಲಿ ವಿತರಣೆ ಮಾಡಕೂಡದು ಮತ್ತು ಅದನ್ನು ಸಂಘದ ಉದ್ದೇಶಗಳಿಗಾಗಿಯೇ ಉಪಯೋಗಿಸತಕ್ಕದ್ದು.

7. ಈ ನಿವೇದನೆ ಮತ್ತು ನಿಬಂಧನೆಗಳನ್ನು ಸಲ್ಲಿಸಲು ಹಾಗೂ ರಜಿಸ್ಟ್ರಾರವರೊಡನೆ ವ್ಯವಹರಿಸಲು ಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಅವರಿಗೆ ಅಧಿಕಾರ ಕೊಟ್ಟಿರುತ್ತದೆ.

## ನಿಬಂಧನೆಗಳು

1. ಸಂಘದ ಹೆಸರು ಮತ್ತು ವಿಳಾಸ : ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್.

1st ಫ್ಲೋರ್, ಆಫೀಸ್ ಆಫ್ ದಿ ಡೈರೆಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ.

2. ಸಂಘದ ನಿಬಂಧನೆಗಳು : ಸಂಘದ ನಿಯಮ ಹಾಗೂ ನಿಬಂಧನೆಗಳು ಈ ಕೆಳಗಿನಂತಿವೆ.

1. ಈ ನಿಬಂಧನೆಗಳು ಸಂಘದ ನಿವೇದನಾ ಪತ್ರಿಕೆಯಲ್ಲಿ ನಮೂದಿಸಿರುವ ಉದ್ದೇಶಗಳನ್ನು ಈಡೇರಿಸುವುದಕ್ಕೆ ರಚಿಸಲ್ಪಟ್ಟಿವೆ.
2. ಸದಸ್ಯತ್ವ: ಒಪ್ಪಂದ ಕಾಯ್ದೆಯ ಪ್ರಕಾರ ಈ ಸಂಘದ ನಿವೇದನಾ ಪತ್ರಿಕೆಯಲ್ಲಿನ ಉದ್ದೇಶಗಳನ್ನು ಒಪ್ಪುವ ಹಾಗೂ ಅವುಗಳಿಗೆ ಬದ್ಧರಾಗಿರುವ ಕೆ. ಎಲ್. ಇ. ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳು ಮಾತ್ರ ಅದರಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಡಾಕ್ಟರೇಟ್ ಪದವಿ ಪಡೆದವರು ಮಾತ್ರ ಸಂಘದ ಸದಸ್ಯರಾಗಿರುತ್ತಾರೆ ಈ ಸಂಘದ ಕಾರ್ಯಕ್ಷೇತ್ರದಲ್ಲಿ ವಾಸವಾಗಿರುವ 18 ವರ್ಷ ಪ್ರಾಯ ಮೀರಿದವರು ಮಾತ್ರ ಈ ಸಂಘದ ಸದಸ್ಯರಾಗಲು ಅರ್ಹರಿರುತ್ತಾರೆ.
3. ಈ ಸಂಘದ ಸದಸ್ಯರಾಗ ಬಯಸುವವರು ನಿರ್ದಿಷ್ಟ ಪಡಿಸಿದ ಮಾದರಿಯಲ್ಲಿ ಸದಸ್ಯತ್ವಕ್ಕೆ ಅರ್ಜಿಯನ್ನು ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು. ಸದಸ್ಯರನ್ನು ಮಾಡಿಕೊಳ್ಳುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರುತ್ತದೆ. ಅರ್ಜಿಯನ್ನು ತಿರಸ್ಕರಿಸಿದಲ್ಲಿ ಒಂದು ತಿಂಗಳೊಳಗಾಗಿ ಅರ್ಜಿದಾರರಿಗೆ ಕಾರಣಗಳನ್ನು ತಿಳಿಸತಕ್ಕದ್ದು.
4. ಸಂಘದ ಸದಸ್ಯತ್ವದ ವರ್ಗವು ಈ ಕೆಳಕಂಡಂತೆ ಇರುತ್ತದೆ.
   1. ಅಜೀವ ಸದಸ್ಯತ್ವ ಫೀ ರೂ 1000/– ಆಗಿದ್ದು ಬೈಲಾದ ಚಂದಾದಾರರು ಸಂಘದ ಸ್ಥಾಪಕ ಸದಸ್ಯರು ಹಾಗೂ ಜೀವಮಾನ ಸದಸ್ಯರಾಗಿರುತ್ತಾರೆ. ಮತ್ತು ಅವರನ್ನು ಸಂಘದ ಸ್ಥಾಪಕ–ಜೀವಮಾನ ಸದಸ್ಯರು ಎಂದು ಕರೆಯಲಾಗುತ್ತದೆ. ಪೋಷಕರಿಂದ ನಾಮನಿರ್ದೇಶನಗೊಂಡ ಈ ಸಂಸ್ಥಾಪಕ ಜೀವಮಾನ ಸದಸ್ಯರು ಸಂಘದ ಪ್ರಥಮ ಕಾರ್ಯಕಾರಿಸಮಿತಿಯ ಸದಸ್ಯರಾಗಿರುತ್ತಾರೆ. ವಾರ್ಷಿಕ ವರ್ಗಣಿ ಫೀ ರೂ. 500/– ಆಗಿರುತ್ತದೆ. ಸಾಮಾನ್ಯ ಸದಸ್ಯತ್ವ ಫೀ ರೂ. 200/– ಆಗಿರುತ್ತದೆ.
5. ಯಾವುದೇ ಸದಸ್ಯರು ಈ ಸಂಘದ ಹಿತಕ್ಕೆ ವಿರೋಧವಾಗಿ ವರ್ತಿಸುತ್ತಿದ್ದಾರೆ ಎಂದು ಕಂಡುಬಂದರೆ ಅವರಿಗೆ ಕನಿಷ್ಟ 7 ದಿವಸಗಳ ನೋಟಿಸು ಕೊಟ್ಟು ಕಾರ್ಯಕಾರಿ ಸಮಿತಿಯು ಅವರ ಸದಸ್ಯತ್ವವನ್ನು ವಜಾ ಮಾಡಬಹುದು. ಅಂತಹ ಸದಸ್ಯರಿಗೆ ಸರ್ವ ಸದಸ್ಯರ ಸಭೆಗೆ ಮೇಲ್ಮನವಿ ಸಲ್ಲಿಸಲು ಅಧಿಕಾರವಿರುತ್ತದೆ.
6. ಕಾರ್ಯಕಾರಿ ಸಮಿತಿಯ ಯಾವುದೇ ಸದಸ್ಯನು ಕಾರ್ಯಕಾರಿ ಸಮಿತಿಯ ಮೂರು ಸಭೆಗಳಿಗೆ ಸತತವಾಗಿ ಪೂರ್ವಸೂಚನೆ ಇಲ್ಲದೆ ಗೈರು ಹಾಜರಾಗಿದ್ದರೆ, ಪೂರ್ವ ಸೂಚನೆ ಇಲ್ಲದೆ, ಅವನು/ಅವಳು ಕಾರ್ಯಕಾರಿ ಸಮಿತಿಯ ಸದಸ್ಯತ್ವದಿಂದ ಹೊರಬರುತ್ತಾರೆ.
7. ಅಸೋಸಿಯೇಷನ್‌ನ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿದ್ದಲ್ಲಿ ಅಥವಾ ದುರ್ನಡತೆ ತೋರಿದ ಸಂದರ್ಭದಲ್ಲಿ ಸದಸ್ಯರನ್ನು ಹೊರಹಾಕುವ ಅಧಿಕಾರವನ್ನು ಕಾರ್ಯಕಾರಿ ಸಮಿತಿಯು ಹೊಂದಿರುತ್ತದೆ, ಸಂಬಂಧಪಟ್ಟ ಸದಸ್ಯನು ಅವನ/ಅವಳ ದುಷ್ಕೃತ್ಯಕ್ಕೆ ಸ್ವೀಕರಾರ್ಹ ವಿವರಣೆಯನ್ನು ನೀಡಬೇಕಾಗುತ್ತದೆ.
8. ಸದಸ್ಯತ್ವ ನಿಂತು ಹೋಗುವುದು.
   1. ಮರಣ ಹೊಂದಿದರೆ.
   2. ಬುದ್ಧಿ ಭ್ರಮಣೆಯಾದರೆ.
   3. ಅಪರಾಧಿಯಾಗಿದ್ದರೆ,
   4. ಸದಸ್ಯತ್ವದಿಂದ ವಜಾ ಮಾಡಲ್ಪಟ್ಟರೆ.
   5. ರಾಜೀನಾಮೆ ಕೊಟ್ಟರೆ.
   6. 3 ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಚಂದಾ ಬಾಕಿ ಇರುವ ಸದಸ್ಯರಿಗೆ.

7. ಮತದಾನ : ಪ್ರತಿಯೊಬ್ಬ ಸದಸ್ಯನಿಗೆ ಒಂದೆ ಮತವಿರುತ್ತದೆ. ಮತ್ತು ಅದನ್ನು ಖುದ್ದಾಗಿ ಚಲಾಯಿಸತಕ್ಕದ್ದು. ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಚಂದಾ ಬಾಕಿ ಇರುವ ಸದಸ್ಯರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. ಸರ್ವ ಸದಸ್ಯರ ಸಭೆಯ ತಾರೀಖಿಗೆ ಕನಿಷ್ಟ 15 ದಿನಗಳ ಮುಂಚಿತವಾಗಿ ಮತದಾನ ಮಾಡಲು ಅರ್ಹರಿರುವ ಸದಸ್ಯರ ಪಟ್ಟಿಯನ್ನು ತಯಾರಿಸತಕ್ಕದ್ದು.

8. ಸದಸ್ಯರ ಪುಸ್ತಕ : ಈ ಸಂಘದ ಸದಸ್ಯರ ಪುಸ್ತಕವನ್ನು ಇಡತಕ್ಕದ್ದು ಮತ್ತು ಅದರಲ್ಲಿ ಸದಸ್ಯರ ವಿಳಾಸ, ಹೆಸರು, ವಯಸ್ಸು, ಉದ್ಯೋಗ ಹಾಗೂ ಮೊದಲಾದ ವಿವರಗಳನ್ನು ಕಾರ್ಯದರ್ಶಿಯು ನಮೂದಿಸತಕ್ಕದ್ದು ಮತ್ತು ಸದಸ್ಯರ ರುಜು ಪಡೆಯತಕ್ಕದ್ದು.

9. ಸರ್ವ ಸದಸ್ಯರ ಸಭೆಃ ಸರ್ವ ಸದಸ್ಯರ ಸಭೆಯು ಸಂಘದ ಎಲ್ಲ ಸದಸ್ಯರನ್ನೊಳಗೊಂಡಿರುತ್ತದೆ. ಸರ್ವ ಸದಸ್ಯರ ವಿಶೇಷ ಸಭೆಯನ್ನು ಸಾಲಾಖೈರಿನಿಂದ 6 ತಿಂಗಳೊಳಗಾಗಿ ಪ್ರತಿ ವರ್ಷ ನೇರವೇರಿಸತಕ್ಕದ್ದು. ವಿಶೇಷ ಸಭೆಯನ್ನು ಕಾರ್ಯಕಾರಿ ಸಮಿತಿಯು ಬೇಕಾದಾಗ ಕರೆಯಬಹುದು. ಆದರೆ 1960ರ ಕರ್ನಾಟಕ ಸೊಸೈಟಿ ರಜಿಸ್ಟ್ರೇಶನ್ ಕಾಯ್ದೆಯ 11 (3) ನೇ ವಿಧಿಯನ್ವಯ ಸೂಚನಾ ಪತ್ರ ಬಂದಾಗ ಆ ವಿಧಿಗಳನ್ನು ಅನುಸರಿಸಿ ವಿಶೇಷ ಸಭೆಯನ್ನು ಕರೆಯಲೇಬೇಕು. ಅದರಲ್ಲಿ

1. ಕಾರ್ಯಕಾರಿ ಸಮಿತಿಯನ್ನು ಆಯ್ಕೆ/ಸರ್ವಾನುಮತದಿಂದ ನಾಮ ನಿರ್ದೇಶನ ಮಾಡುವುದು.
2. ಕಾರ್ಯಕಾರಿ ಸಮಿತಿಯು ಅಗತ್ಯವಿದ್ದಾಗ ಸಾಮಾನ್ಯ ಸಭೆಗಳನ್ನು ಕರೆಯಬಹುದು.
3. ಸಾಮಾನ್ಯ ಸಮಿತಿಯ ವಿಶೇಷ ಸಭೆಗಳನ್ನು ಸದಸ್ಯರ ವಿನಂತಿಯ ಮೇರೆಗೆ ವಿನಂತಿ ಪತ್ರದ ದಿನಾಂಕದ ಎರಡು ತಿಂಗಳೊಳಗೆ ಕರೆಯುವುದು. ಈ ವಿನಂತಿಯು 1/3 ರಷ್ಟು ಸದಸ್ಯರಿಂದ ಬಂದಿರಬೇಕು.
4. ಕಾರ್ಯಕಾರಿ ಸಮಿತಿಯ ಸಭೆಗಳನ್ನು ಸಾಮಾನ್ಯವಾಗಿ 3 ತಿಂಗಳಿಗೊಮ್ಮೆ ಕರೆಯಬೇಕು.
5. ಕಾರ್ಯಕಾರಿ ಸಮಿತಿಯ7 ಸದಸ್ಯರಿಗಿಂತ ಕಡಿಮೆ ಇಲ್ಲದಂತೆ ಲಿಖಿತ ಕೋರಿಕೆಯ ಮೇರೆಗೆ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಗಳನ್ನು ಕರೆಯಬೇಕು.
6. ಕಾರ್ಯಕಾರಿ ಸಮಿತಿಯು ಸಭೆಯ ಕೋರಂನಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಮೂರನೇ ಒಂದು ಭಾಗ ಇರಬೇಕು.

10. **ನೋಟಿಸು:** ಸರ್ವ ಸದಸ್ಯರ ಸಭೆಗೆ ಕನಿಷ್ಠ 21 ದಿವಸಗಳು ಮತ್ತು ನಿವೇದನೆಗಳನ್ನು ತಿದ್ದುಪಡಿ ಮಾಡುವ ವಿಶೇಷ ಸಭೆಗೆ ಕನಿಷ್ಠ 21 ದಿವಸಗಳ ನೋಟಿಸನ್ನು ಎಲ್ಲ ಸದಸ್ಯರಿಗೆ ಕಳುಹಿಸತಕ್ಕದ್ದು. ನೋಟಿಸಿನಲ್ಲಿ ಸಭೆ ಸೇರತಕ್ಕ ಸ್ಥಳ, ದಿನಾಂಕ, ವೇಳೆ ಮತ್ತು ಚರ್ಚಿಸತಕ್ಕ ಎಲ್ಲ ವಿಷಯಗಳನ್ನು ನಮೂದಿಸತಕ್ಕದ್ದು. ಯಾರಿಗಾದರೂ ನೋಟಿಸ ತಲುಪಿರುವುದಿಲ್ಲ ಎಂಬ ಒಂದೇ ಕಾರಣದಿಂದ ಸಭೆಯ ಕಾರ್ಯಕಲಾಪಗಳು ಅಸಿಂಧೂವಾಗಲಾರವು.

11. **ಸಭೆಗಳಿಗೆ ಸಂಬಂಧಿಸಿದ ಸಾಮಾನ್ಯ ನಿಬಂಧನೆಗಳು:**
    1. ಜನರಲ್ ಬಾಡಿ/ ಎಕ್ಸಿಕ್ಯೂಟಿವ್ ಕಮಿಟಿಯ ಎಲ್ಲಾ ಸಭೆಗಳಿಗೆ ಸಾಮಾನ್ಯವಾಗಿ ಏಳು ದಿನಗಳ ನೋಟಿಸ್ ನೀಡಲಾಗುವುದು. ಜನರಲ್ ಬಾಡಿ ಸಭೆಯ ಸೂಚನೆಯನ್ನು ವಿಶ್ವವಿದ್ಯಾಲಯವು ಅನುಮೋದಿಸಿದ ಎರಡು ಪತ್ರಿಕೆಗಳು/ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
    2. ಅಧ್ಯಕ್ಷರ ಅನುಪಸ್ಥಿತಿಯಲ್ಲಿ, ಉಪಾಧ್ಯಕ್ಷರು ಸಾಮಾನ್ಯ ಮಂಡಳಿ/ ಕಾರ್ಯಕಾರಿ ಸಮಿತಿಯ ಸಭೆಗಳ ಅಧ್ಯಕ್ಷತೆ ವಹಿಸುವರು. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅನುಪಸ್ಥಿತಿಯಲ್ಲಿ, ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯರು ಸಭೆಯ ಅಧ್ಯಕ್ಷತೆ ವಹಿಸುವರು.
    3. ಎಲ್ಲಾ ನಿರ್ಧಾರಗಳು ಬಹುಪಾಲು ಮತಗಳ ಆಧಾರದ ಮೇಲೆ ಇರಬೇಕು. ಮತಗಳುಸಮವಾಗಿದ್ದ ಸಂದರ್ಭದಲ್ಲಿ, ಸಭೆಯ ಅಧ್ಯಕ್ಷರು ಮತಚಲಾಯಿಸಬೇಕಾಗುತ್ತದೆ.

12. **ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ**
    1. ಹಿಂದಿನ ಸಾಲಿನ ಆಡಳಿತ ವರದಿ
    2. ಆಡಿಟ್ ಆಗಿರುವ ಲೆಕ್ಕಪತ್ರಗಳು.
    3. ಪ್ರಸಕ್ತ ವರ್ಷದ ವಾರ್ಷಿಕ ವರದಿ
    4. ಆಯವ್ಯಯದ ಮುಂಗಡ ಕರಡು
    5. ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆ ಮತ್ತು ನೋಟಿಸನಲ್ಲಿ ಬರುವ ವಿಷಯಗಳನ್ನು ಚರ್ಚಿಸತಕ್ಕದ್ದು.

13. **ಕೋರಂ:** ಸರ್ವ ಸದಸ್ಯರ ಸಭೆಯಲ್ಲಿ ಒಟ್ಟು ಸದಸ್ಯರ 3ನೇ ಒಂದು ಭಾಗ ಅಥವಾ ಅರ್ಧದಷ್ಟು ಸದಸ್ಯರು ಇವುಗಳಲ್ಲಿ ಯಾವ ಸಂಖ್ಯೆಯು ಇರುತ್ತದೆಯೋ ಅಷ್ಟು ಸದಸ್ಯರು ಹಾಜರಿದ್ದರೆ ಮಾತ್ರ ಕೋರಂ ಆಗುತ್ತದೆ. ಈ ರೀತಿ ಕೋರಂ ಆದರೆ ಮಾತ್ರ ಸಭೆಯ ಕಾರ್ಯಕಲಾಪಗಳನ್ನು ನಡೆಯಿಸತಕ್ಕದ್ದು.

14. ಸರ್ವಸದಸ್ಯರ ಸಭೆಯಲ್ಲಿ ಎಲ್ಲ ವಿಷಯಗಳು ಹಾಜರಿರುವ ಸದಸ್ಯರ ಬಹುಮತದಿಂದ ತೀರ್ಮಾನಿಸಲ್ಪಡತಕ್ಕದ್ದು. ಯಾವುದೇ ವಿಷಯಗಳ ಬಗ್ಗೆ ಸಮಮತಗಳು ಬಿದ್ದಾಗ ಸಭೆಯ ಅಧ್ಯಕ್ಷರಿಗೆ ಒಂದು ಹೆಚ್ಚಿನ ಮತವಿರುತ್ತದೆ. ಒಂದು ವೇಳೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಮಮತಗಳು ಬಿದ್ದಾಗ ಸಭೆಯ ಅಧ್ಯಕ್ಷರು ತಮ್ಮ ಮತವನ್ನು ಚಲಾಯಿಸುವ ಮೂಲಕ ಸ್ಪಷ್ಟ ಬಹುಮತವನ್ನು ಸಾಬೀತುಪಡಿಸಬಹುದು.

15. **ತಿದ್ದುಪಡಿ:** 1960 ರ ಕರ್ನಾಟಕ ಸೊಸೈಟಿಗಳ ರಜಿಸ್ಟ್ರೇಶನ್ ಕಾಯ್ದೆಯ 9 ಮತ್ತು 10 ನೇ ವಿಧಿಗಳನ್ವಯ ಕ್ರಮ ಕೈಕೊಂಡು ನಿವೇದನೆ ಪತ್ರಿಕೆ ಮತ್ತು ನಿಬಂಧನೆಗಳನ್ನು ಅವಶ್ಯವೆನಿಸಿದರೆ ಬದಲಾಯಿಸಬಹುದು. ಅಂತಹ ತಿದ್ದುಪಡಿಯು ರಜಿಸ್ಟ್ರಾರವರಿಂದ ಅನುಮತಿ ಪಡೆದ ಮೇಲೆ ಮಾತ್ರ ಜಾರಿಯಲ್ಲಿ ಬರುತ್ತವೆ.

16. ಬೈಲಾದ (ಉಪ–ಕಾನೂನುಗಳ)ಯಾವುದೇ ನಿಬಂಧನೆಗಳನ್ನು ಸಂಘದ ಸಾಮಾನ್ಯ ಸಭೆಯಲ್ಲಿ ಹಾಜರಿರುವ ಮೂರನೇ ಎರಡರಷ್ಟು ಸದಸ್ಯರು ಮತ ಚಲಾಯಿಸುವ ಮೂಲಕ ತಿದ್ದುಪಡಿ ಮಾಡಬಹುದು.

17. **ಕಾರ್ಯಕಾರಿ ಸಮಿತಿ:** ಈ ಸಂಘದ ಆಡಳಿತವನ್ನು ನಡೆಸುವುದಕ್ಕೆ 11 ಜನ ಸದಸ್ಯರ ಒಂದು ಕಾರ್ಯಕಾರಿ ಸಮಿತಿಯು ಇರುತ್ತದೆ. ಈ ಎಲ್ಲ ಸದಸ್ಯರನ್ನು ಸರ್ವ ಸಾಧಾರಣ ವಾರ್ಷಿಕ ಸಭೆಯಲ್ಲಿ ಪ್ರತಿ 3 ವರ್ಷಕ್ಕೆ ಒಂದು ಸಲ ಆರಿಸತಕ್ಕದ್ದು. ಅವರಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಒಬ್ಬರು ಖಜಾಂಚಿ ಹಾಗೂ ಇನ್ನುಳಿದ 07 ಜನ ಸದಸ್ಯರು ಇರುತ್ತಾರೆ. ಚುನಾವಣಾ ವಿಧಾನವು ರಹಸ್ಯಸರ್ವಾನುಮತದ ಅಥವಾ ಮತದಾನ ಮೂಲಕ ಇರಬೇಕು. ಚುನಾವಣಾ ಕಾರ್ಯವಿಧಾನವನ್ನು ಕಾರ್ಯಕಾರಿ ಸಮಿತಿಯು ನಿಗದಿಪಡಿಸುತ್ತದೆ. ಚುನಾಯಿತ ಸದಸ್ಯರ ಎಲ್ಲಾ ಅಧಿಕಾರದ ಅವಧಿಗಳು ಚುನಾವಣೆಗಳು ನಡೆದ ಎಜಿಬಿಎಂನ ಮುಕ್ತಾಯದಿಂದ ಪ್ರಾರಂಭವಾಗುತ್ತವೆ ಮತ್ತು ಮೂರು ವರ್ಷಗಳ ಅವಧಿಗೆ ಮುಂದುವರಿಯುತ್ತದೆ ಅಥವಾ ಮೂರನೆಯ ಎಜಿಬಿಎಂ ಮುಗಿಯುವವರೆಗೂ ಇದರಲ್ಲಿ ಯಾವುದಾದರೂ ಒಂದು ಅಥವಾ ಯಾವುದು ಮೊದಲೋ ಅದು ಅನ್ವಯವಾಗುತ್ತದೆ.

18. ನಿವೇದನಾ ಪತ್ರಿಕೆಯಲ್ಲಿ ರುಜು ಮಾಡಿರುವ ಸದಸ್ಯರು ಕಾರ್ಯಕಾರಿ ಸಮಿತಿಯ ಪ್ರಥಮ ಹಾಗೂ ಸಂಸ್ಥಾಪಕ ಸದಸ್ಯರಾಗಿರುತ್ತಾರೆ. ಮುಂದಿನ ಅವಧಿಗೆ ಸದಸ್ಯರು ಆರಿಸಲ್ಪಡುವವರೆಗೆ ಅವರು ಮುಂದುವರೆಯುತ್ತಾರೆ. ಕಾರ್ಯಕಾರಿ ಸಮಿತಿಯ ಸದಸ್ಯರ ಅವಧಿಯು 3 ವರ್ಷದವರೆಗಿರುತ್ತದೆ.
19. ಸರ್ವ ಸದಸ್ಯರ ಸಭೆಯು ಜರುಗಿದ 8 ದಿನಗಳೊಳಗಾಗಿ ಹೊಸದಾಗಿ ಆರಿಸಲ್ಪಟ್ಟ ಸದಸ್ಯರ ಸಭೆಯನ್ನು ಕಾರ್ಯದರ್ಶಿಯು ಕರೆಯಲೇಬೇಕು ಮತ್ತು ಅವರಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಒಬ್ಬರು ಖಜಾಂಚಿ ಹಾಗೂ ಇನ್ನುಳಿದ ಸದಸ್ಯರನ್ನು ತಮ್ಮೊಳಗೆ ಆರಿಸತಕ್ಕದ್ದು. ನಿರ್ಗಮಿಸುವ ಕಾರ್ಯದರ್ಶಿಯು ಆಗಮಿಸುವ ಕಾರ್ಯದರ್ಶಿಯವರಿಗೆ ಕೂಡಲೆ ಸಂಘದ ಎಲ್ಲ ಚಾರ್ಜವನ್ನು (ಹೊಣೆಗಾರಿಕೆಯನ್ನು) ವಹಿಸಿ ಕೊಡತಕ್ಕದ್ದು ಮತ್ತು ಚಾರ್ಜ ಪಟ್ಟಿಯನ್ನು ನಡುವಳಿಕೆ ಪಟ್ಟಿಯಲ್ಲಿ ಬರೆಯತಕ್ಕದ್ದು.
20. ಚಂದಾ ಬಾಕಿ ಇರುವ ಸದಸ್ಯರ ಕಾರ್ಯಕಾರಿ ಸಮಿತಿ ಸದಸ್ಯತ್ವವು ಚಂದಾ ಬಾಕಿ ಇರುವ ತಾರೀಖಿನಿಂದ ನಿಂತು ಹೋಗುತ್ತದೆ.
21. ಕಾರ್ಯಕಾರಿ ಸಮಿತಿಯೂ ಬೇಕಾದಾಗ ಸಭೆ ಸೇರಬಹುದು. ಆದರೆ 3 ತಿಂಗಳೊಳಗಾಗಿ ಸೇರಲೇಬೇಕು.
22. ಕೋರಂ: ಕಾರ್ಯಕಾರಿ ಸಮಿತಿ ಸಭೆಗೆ ಕನಿಷ್ಠ ಅರ್ಧಕ್ಕಿಂತ ಹೆಚ್ಚು ಜನ ಹಾಜರಿದ್ದರೆ ಕೋರಂ ಆಗುತ್ತದೆ. ಕೋರಂ ಆದರೆ ಮಾತ್ರ ಸಭೆಯ ಕಾರ್ಯಕಲಾಪಗಳನ್ನು ನಡೆಸತಕ್ಕದ್ದು. ಯಾವುದೇ ಕಾರಣದಿಂದ ತೆರವಾದ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಮಾನಗಳನ್ನು ಇನ್ನುಳಿದ ಸದಸ್ಯರು ಕೋ-ಆಪ್ಟ ಮಾಡಿ ಸಂಘದ ಸದಸ್ಯರಲ್ಲಿ ಸೂಕ್ತ ತಂಡವನ್ನು ಇನ್ನುಳಿದ ಅವಧಿಗೆ ನೇಮಿಸಿಕೊಳ್ಳಬಹುದು. ಕಾರ್ಯಕಾರಿ ಸಮಿತಿಯ ಯಾವುದೇ ಮಟ್ಟದಲ್ಲಿ ಖಾಲಿ ಹುದ್ದೆ ಇದ್ದಲ್ಲಿ, ಕಾರ್ಯಕಾರಿ ಸಮಿತಿಯು ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸದಸ್ಯರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ.
23. ನೋಟಿಸು: ಕಾರ್ಯಕಾರಿ ಸಮಿತಿ ಸಭೆ ಕರೆಯಲು ಕನಿಷ್ಠ 7 ದಿನಗಳ ಅವಧಿಯ ನೋಟಿಸನ್ನು ಕೊಡತಕ್ಕದ್ದು. ಆದರೆ ತುರ್ತು ಸಂದರ್ಭಗಳಲ್ಲಿ ಕೂಡಲೆ ಸಭೆಯನ್ನು ಕರೆಯಬಹುದು.
24. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಲ್ಲ ವಿಷಯಗಳು ಹಾಜರಿರುವ ಸದಸ್ಯರ ಬಹುಮತದಿಂದ ತೀರ್ಮಾನಿಸಲ್ಪಡತಕ್ಕದ್ದು. ಅದರಂತೆ ಯಾವುದೇ ವಿಷಯಗಳಲ್ಲಿ ಸಮಮತಗಳು ಬಿದ್ದಾಗ ಸಭೆಯ ಅಧ್ಯಕ್ಷರಿಗೆ ಒಂದು ಹೆಚ್ಚಿನ ಮತವಿರುತ್ತದೆ.
25. ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರು ವಹಿಸತಕ್ಕದ್ದು ಅವರು ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು, ಒಂದು ವೇಳೆ ಉಪಾಧ್ಯಕ್ಷರು ಸಹ ಗೈರು ಹಾಜರಿದ್ದರೆ ಆಗ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮೊಳಗೊಬ್ಬರನ್ನು ಆ ದಿನದ ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು.
26. ಬ್ಯಾಂಕ್ ಲೆಕ್ಕ ಮತ್ತು ವ್ಯವಹಾರ ವ್ಯಾಪ್ತಿಗಳು: ಸದಸ್ಯತ್ವ ಶುಲ್ಕಗಳು, ದೇಣಿಗೆಗಳು, ಚಂದಾದಾರಿಕೆಗಳು ಇತ್ಯಾದಿಗಳಾಗಿ ಪಡೆದ ಹಣವು ಸಂಘದ ಆದಾಯವಾಗಿರುತ್ತದೆ. ಈ ಸಂಘದ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಮಾತ್ರ ಖಾತೆಯುನ್ನು ತೆಗೆಯಲು ಮತ್ತು ಅದನ್ನು ವ್ಯವಹರಿಸಲು ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರಿಗೆ ಮಾತ್ರ ಅಧಿಕಾರವಿರುತ್ತದೆ ಅಂದರೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿ ಇವರಲ್ಲಿ ಯಾರಾದರೂ ಇಬ್ಬರು ಮಾತ್ರ ಜಂಟಿಯಾಗಿ ವ್ಯವಹರಿಸತಕ್ಕದ್ದು.
27. ಕರ್ತವ್ಯ ಮತ್ತು ಜವಾಬ್ದಾರಿಗಳು: ಈ ಸಂಘದ ನಿಬಂಧನೆಗಳು ಹಾಗೂ ಸರ್ವ ಸದಸ್ಯರ ಸಭೆಯು ಕಾಲಕಾಲಕ್ಕೆ ಮಾಡಬಹುದಾದ ತೀರ್ಮಾನಗಳಿಗೊಳಪಟ್ಟ ಸಂಘದ ಆಡಳಿತ ಮತ್ತು ಹಣಕಾಸಿನ ವ್ಯವಹಾರದ ಅಧಿಕಾರವು ಕಾರ್ಯಕಾರಿ ಸಮಿತಿಗಿರುತ್ತದೆ. ಈ ನಿಬಂಧನೆಗಳಲ್ಲಿ ಬೇರೆಡೆಗೆ ಉಲ್ಲೇಖಿಸಿರುವ ಕೆಲಸವನ್ನೊಳಗೊಂಡು ಈ ಕೆಳಕಂಡಂತೆ ಕರ್ತವ್ಯಗಳಿರುತ್ತವೆ.
    1. ಸಂಘದ ವ್ಯವಹಾರಗಳನ್ನು ಕಾರ್ಯಕಾರಿ ಸಮಿತಿಯು ನಿರ್ವಹಿಸುತ್ತದೆ.
    2. ಸಂಘದ ಪರವಾಗಿ ಕೋರ್ಟ ವ್ಯವಹಾರ ನಡೆಸುವುದು ಮತ್ತು ಸರಕಾರ ಅಥವಾ ಸಂಘ ಸಂಸ್ಥೆಗಳಲ್ಲಿ ಪ್ರತಿನಿಧಿಸಲು ಯಾವುದೇ ಪದಾಧಿಕಾರಿಗಳಿಗೆ ಅಧಿಕಾರ ಕೊಡುವುದು.
    3. ಈ ಸಂಘದ ಎಲ್ಲ ತರಹದ ಸಿಬ್ಬಂದಿ, ಕಾರ್ಯಕರ್ತರನ್ನು ನೇಮಿಸುವುದು, ವಜಾ ಮಾಡುವುದು, ಮತ್ತು ಅವರ ಕೆಲಸ ಮತ್ತು ವೇತನವನ್ನು ನಿಗದಿ ಮಾಡುವುದು.
    4. ಹಣಕಾಸಿನ ವ್ಯವಹಾರದ ಲೆಕ್ಕಗಳನ್ನು ಪರಿಶೀಲಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.
    5. ಲೆಕ್ಕ ಪತ್ರ ಪರಿಶೀಲನೆಗೆ ಅಡಿಟರನ್ನು ನೇಮಿಸುವುದು ಮತ್ತು ಅವರ ಸಂಬಳ ನೀಡುವುದು ಹಾಗೂ ಮೇಲ್ವಿಚಾರಣೆ ಮಾಡುವುದು.
    6. ಕಾರ್ಯಕಾರಿ ಸಮಿತಿಯು ಸಂಘದ ಉದ್ದೇಶಗಳನ್ನು ನಿರ್ವಹಿಸಲು ಅಗತ್ಯವಾದ ಖರ್ಚುಗಳನ್ನು ಮಾಡುವ ಅಧಿಕಾರವನ್ನು ಹೊಂದಿರುತ್ತದೆ.
    7. ಕಾರ್ಯಕಾರಿ ಸಮಿತಿಯು ಸಂಘದ ಉದ್ದೇಶಗಳು ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಉಪ-ಕಾನೂನುಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿರುತ್ತದೆ. ತಾತ್ಕಾಲಿಕ ಬೈಲಾಗಳನ್ನು ಅನುಮೋದನೆಗಾಗಿ ಮುಂದಿನ ಸಾಮಾನ್ಯಸಭೆಯ ಮುಂದೆ ಇಡಲಾಗುತ್ತದೆ.
    8. ಸಂಘದ ಆಡಳಿತಕ್ಕೆ ಸಂಬಂಧಪಟ್ಟ ಇತರೆ ಕಾರ್ಯಗಳನ್ನು ಮಾಡುವುದು.
28. ಅಧ್ಯಕ್ಷರು: ಈ ಸಂಘದ ಮುಖ್ಯಸ್ಥರು ಮತ್ತು ಮೇಲ್ವಿಚಾರಕರು ಸರ್ವ ಸದಸ್ಯರ ಸಭೆ ಹಾಗೂ ಕಾರ್ಯಕಾರಿ ಸಮಿತಿಗಳ ಅಧ್ಯಕ್ಷತೆ ವಹಿಸುವುದು. ಕಾರ್ಯದರ್ಶಿಯವರಿಗೆ ಸಕಲ ಕಾಲಕ್ಕೆ ಸಲಹೆ ಸೂಚನೆಗಳನ್ನು ಕೊಡುವುದು. ವಿಶೇಷ ಸಂದರ್ಭಗಳಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ಅಥವಾ ಕಾರ್ಯಕಾರಿ ಸಮಿತಿ ಕರೆಯಲು ಅಧಿಕಾರವಿರುತ್ತದೆ.

29. ಉಪಾಧ್ಯಕ್ಷರು: ಅಧ್ಯಕ್ಷರು ಗೈರು ಹಾಜರಿಯಲ್ಲಿ ಇರುವಾಗ ಉಪಾಧ್ಯಕ್ಷರು ಅಧ್ಯಕ್ಷರವರ ಎಲ್ಲ ಕಾರ್ಯಗಳನ್ನು ನಿರ್ವಹಿಸಿ ದೈನಂದಿನ ದಿನದ ಕೆಲಸಗಳಲ್ಲಿ ಸಹಕಾರ ನೀಡುವುದು.
30. ಕಾರ್ಯದರ್ಶಿ: ಕಾರ್ಯಕಾರಿ ಸಮಿತಿಯ ತೀರ್ಮಾನಗಳು ಹಾಗೂ ನಿಬಂಧನೆಗೊಳಪಟ್ಟ ಈ ಕೆಳಕಂಡ ಕೆಲಸಗಳನ್ನು ಕಾರ್ಯದರ್ಶಿ ಮಾಡತಕ್ಕದ್ದು.
    1. ಅಧ್ಯಕ್ಷರ ಸಲಹೆ ಮೇರೆಗೆ ಸಭೆಗಳನ್ನು ಕರೆಯುವುದು.
    2. ಸಂಘಕ್ಕೆ ಬರುವ ಹಣವನ್ನು ಸ್ವೀಕರಿಸುವುದು ಹಾಗೂ ರಶೀದಿಗಳನ್ನು ಕೊಡುವುದು.
    3. ಕಾರ್ಯಕಾರಿ ಸಮಿತಿ ಆದೇಶದಂತೆ ಕೋರ್ಟ ವ್ಯವಹಾರ ನಡೆಸುವುದು.
    4. ಸಂಘದ ಲೆಕ್ಕಪತ್ರಗಳನ್ನು ಸರಿಯಾಗಿ ಬರೆದಿಡುವುದು.
    5. ಸಂಘದ ಇತರೇ ಕಾರ್ಯ ಕೆಲಸಗಳನ್ನು ನಿರ್ವಹಿಸುವುದು.
31. ಖಜಾಂಚಿ: ಸಂಘದ ಎಲ್ಲ ಆರ್ಥಿಕ ಮೂಲಗಳು ಮತ್ತು ಚಟುವಟಿಕೆಗಳ ಉಸ್ತುವಾರಿಯಾಗಿರುತ್ತಾರೆ ಸಂಘದ ಹಣಕಾಸಿನ ಮುಖ್ಯಸ್ಥರಾದ ಇವರು ಸಂಘದ ಎಲ್ಲ ರಶೀದಿ, ವೋಚರಗಳನ್ನು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.
32. ವಿವಾದ ಇತ್ಯರ್ಥ: ಸಂಘದೊಳಗೆ ಯಾವುದೇ ವಿವಾದ ಉಂಟಾದರೆ, ಸಂಘದ ಎಕ್ಸ್‌–ಆಫಿಸಿಯೊ ಕಾರ್ಯದರ್ಶಿಯ ಗಮನಕ್ಕೆ ತರಬೇಕು ನಂತರ ವಿಶ್ವವಿದ್ಯಾಲಯದ ಕುಲಪತಿಗಳ ಗಮನಕ್ಕೆ ತರಬೇಕು. ಹಾಗೂ ಈ ವಿಷಯದಲ್ಲಿ ಕುಲಪತಿಯವರ ನಿರ್ಧಾರ/ಆದೇಶವು ಅಂತಿಮವಾಗಿರುತ್ತದೆ.
33. ಸಂಘದಲ್ಲಿ:
    1. ಸದಸ್ಯರ ಪುಸ್ತಕ.
    2. ನಗದು ಪುಸ್ತಕ.
    3. ಖಾತೆ ಪುಸ್ತಕ.
    4. ಸಭೆಗಳ ನಡುವಳಿಕೆಗಳ ಪುಸ್ತಕ.
    5. ರಶೀದಿ ಮತ್ತು ವ್ಹೋಚರಗಳು.

ಇದ್ದು, ಅವುಗಳ ಕಾರ್ಯದರ್ಶಿಯವರ ಸ್ವಾಧೀನ ಇರತಕ್ಕದ್ದು ಮತ್ತು ರಜಿಸ್ಟ್ರಾರವರು ಕೇಳಿದಾಗ ಹಾಜರುಪಡಿಸತಕ್ಕದ್ದು. ಸಂಘದ ಎಲ್ಲ ಸ್ಥಿರ/ಚರಾಸ್ತಿಗೆ ಕಾರ್ಯದರ್ಶಿಯವರೇ ಹೊಣೆಗಾರರು.


34. ಈ ಸಂಘದ ಹಣಕಾಸಿನ ವರ್ಷವು ಎಪ್ರಿಲ್ 1ನೇ ದಿನಾಂಕದಿಂದ ಮಾರ್ಚ 31ನೇ ದಿನಾಂಕ ದವರೆಗಿರುತ್ತದೆ.
35. ವಾರ್ಷಿಕ ಸಭೆಯು ಅನುಮತಿ ಪಡೆದ 14 ದಿನಗಳೊಳಗಾಗಿ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯೊಂದಿಗೆ ಲೆಕ್ಕಗಳನ್ನು ಕಾರ್ಯದರ್ಶಿಯು ರಜಿಸ್ಟ್ರಾರವರಿಗೆ ಕಳುಹಿಸತಕ್ಕದ್ದು.
36. ಸಾಲಾಖೈರು ಆದ ಕೂಡಲೆ ಲೆಕ್ಕಗಳನ್ನು ಕಾರ್ಯದರ್ಶಿಯು ತಯಾರಿಸಿಕೊಂಡು 1956ರ ಕಾಯ್ದೆಯ ಪ್ರಕಾರ 226ನೇ ಅದಿನಿಯಮದನ್ವಯ ಅಧಿಕಾರ ಪಡೆದ ಆಡಿಟರವರಿಂದ ಆಡಿಟ್ ಮಾಡಿಸಿಕೊಂಡು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಬೇಕು.
37. ವಿಸರ್ಜನೆ: ಸಂಘವನ್ನು 1960 ರ ಕರ್ನಾಟಕ ಸೊಸೈಟಿಗಳ ರಜಿಸ್ಟ್ರೇಶನ್ ಕಾಯ್ದೆಯ 22 ಮತ್ತು 23 ನೇ ವಿಧಿಗಳನ್ವಯ ಕ್ರಮ ಕೈಕೊಂಡು ವಿಸರ್ಜಿಸಬಹುದು.
38. ಸಂಯೋಜನೆ: 1960 ರ ಕರ್ನಾಟಕ ಸೊಸೈಟಿಗಳ ರಜಿಸ್ಟ್ರೇಶನ್ ಕಾಯ್ದೆಯ 21 ನೇ ವಿಧಿಗಳನ್ವಯ ಕ್ರಮಕೈಕೊಂಡು ಬೇರಾವುದೇ ರಜಿಸ್ಟರ್ಡ ಸಂಸ್ಥೆಯಲ್ಲಿ ಕೂಡಿಕೊಳ್ಳಬಹುದು.
39. ಕಾರ್ಯಾಲಯದ ವೇಳೆ: ಈ ಸಂಘದ ಕಾರ್ಯಾಲಯದ ವೇಳೆಯು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಇರುವುದು. ಕಾರ್ಯಕಾರಿ ಸಮಿತಿಯು ರಜಿಸ್ಟ್ರಾರವರಿಂದ ಅನುಮತಿ ಪಡೆದ ಮೇಲೆ ಮಾತ್ರ ಕಾರ್ಯಾಲಯದ ವೇಳೆಯಲ್ಲಿ ಬದಲಾವಣೆ ಮಾಡಬಹುದು.
40. ಈ ನಿಬಂಧನೆಗೊಳಗಾಗುವ ವಿಷಯದ ಬಗ್ಗೆ 1960 ಕರ್ನಾಟಕ ಸೊಸೈಟಿಗಳ ರಜಿಸ್ಟ್ರೇಶನ್ ಕಾಯ್ದೆ ಮತ್ತು ಅದರನ್ವಯ ರಚಿಸಲ್ಪಟ್ಟ ನಿಯಮಗಳು ಅನ್ವಯಿಸತಕ್ಕದ್ದು.
41. ಈ ಸಂಘವು ನೊಂದಾಯಿಸಲ್ಪಟ್ಟ ದಿನಾಂಕದಿಂದ ಈ ನಿಬಂಧನೆಗಳು ಜಾರಿಯಲ್ಲಿರುತ್ತವೆ.

ಸ್ಥಳ: ಬೆಳಗಾವಿ.

ದಿನಾಂಕ: 25/10/2020

## ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್.

**1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ.** ಆಡಳಿತ ಮಂಡಳಿಯ ಯಾದಿ

| ನಂ | ಹೆಸರು ಮತ್ತು ವಿಳಾಸ | ವಯಸ್ಸು | ಹುದ್ದೆ | ಉದ್ಯೋಗ | ಸಹಿ | ಭಾವಚಿತ್ರ |
|---|---|---|---|---|---|---|
| 1. | ಡಾ. ಕೋಠಿವಾಲೆ ವೀರಪ್ಪ ಅಣ್ಣಾಸಾಹೇಬ ಹೌಸ್. ನಂ:673, ಸೆಕ್ಟರ್ ನಂ:13, ಟಿ. ವಿ. ಸೆಂಟರ್ ಬೆಳಗಾವಿ. | 61 | ಅಧ್ಯಕ್ಷರು | ವೈದ್ಯರು | |  |
| 2. | ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ #ಎಲ್.ಐ.ಜಿ–198, ಮಹಾಂತೇಶ ನಗರ ಮಾಳ ಮಾರುತಿ ಎಕ್ಸಟೆನ್ಷನ್, ಬೆಳಗಾವಿ. | 42 | ಉಪಾಧ್ಯಕ್ಷರು | ವೈದ್ಯರು | |  |
| 3. | ಡಾ. ರಂಜಿತ ಕಾಂಗಲೆ #101, ರವಿಶಂಕರ ಆರ್ಕಿಡ ಪ್ಲಾಟ್ ನಂ:10, ಸ್ಕೀಮ್ ನಂ:51, ಗಣೇಶಪುರ ರೋಡ ಗೂಡಶೆಡ್ ಸೆಂಟ್ರಲ್ ಸ್ಕೂಲ್ ಎದುರು ಲಕ್ಷ್ಮೀ ಟೆಕ್‌ಡಿ ಬೆಳಗಾವಿ. | 50 | ಕಾರ್ಯದರ್ಶಿ | ವೈದ್ಯರು | |  |
| 4. | ಡಾ. ಬಸವರಾಜ ಶಶಿಧರ ಮೊತಿಮಠ #12, ವಾರ್ಡ ನಂ:53, ರಾಮತೀರ್ಥ ನಗರ ಬೆಳಗಾವಿ ತಾ:ಜಿ:ಬೆಳಗಾವಿ. | 39 | ಖಜಾಂಚಿ | ಫಿಸಿಯೋ ಥೆರಪಿಸ್ಟ್ | |  |
| 5. | ಡಾ. ಅಶೋಕ ಮಲ್ಲಪ್ಪ ಕಮತ #33, ನೆಹರು ನಗರ ಜೆ. ಎನ್. ಎಮ್. ಸಿ. ಬೆಳಗಾವಿ ತಾ:ಜಿ:ಬೆಳಗಾವಿ. | 44 | ಸದಸ್ಯರು | ಪ್ರೋಫೇಸರ್ | |  |
| 6. | ಡಾ. ಅಪೇಕ್ಷಾ ಅಶೋಕ ಪೂಜಾರ ಹೌಸ್. ನಂ:1568, ಮಾರುತಿ ಗಲ್ಲಿ ಅದಿತಿ ಅಪಾರ್ಟಮೆಂಟ್ ಬ್ಯಾಂಕ್ ಆಫ್ ಬರೋಡ ಹಿಂದೆ ಬೆಳಗಾವಿ ತಾ:ಜಿ:ಬೆಳಗಾವಿ. | 50 | ಸದಸ್ಯರು | ಪ್ರೋಫೇಸರ್ | |  |

| | | | | | | |
|---|---|---|---|---|---|---|
| 7. | ಡಾ. ಅರುಣ ಮಲ್ಲಿಕಾರ್ಜುನ ಚೌಗಲೆ ಎ. ಪಿ. ಎಮ್. ಸಿ. ರೋಡ ಆಜಮ್ ನಗರ ಪ್ಲಾಟ್ ನಂ:9, ಫ್ಲ್ಯಾಟ್ ನಂ:1, ವೈಷ್ಣವಿ ರೆಸಿಡೆನ್ಸಿ ಬೆಳಗಾವಿ ತಾ:ಜಿ:ಬೆಳಗಾವಿ. | | ಸದಸ್ಯರು | ವೈದ್ಯರು | |  |
| 8. | ಡಾ. ಹಸನ್ ಪಾಶಾ ಎನ್. ಶೋಲಾಪುರ್ ನಿಯರ್ ಶಿರೂರ ಚಾಳ ಬಿಂದರಗಿ ಓಣಿ ಗಣೇಶ ಪೇಠ ಹುಬ್ಬಳ್ಳಿ ಧಾರವಾಡ. | 43 | ಸದಸ್ಯರು | ಫಾರ್ಮಸಿ | |  |
| 9. | ಶ್ರೀ. ಸುಜೀತ ಕುಮಾರ ರಾಮ ಪ್ರೀತ ಶರ್ಮ #22, 5ನೇ ಮೇನ್ ಶ್ರೀ ಕಂಠೇಶ್ವರ ನಗರ ಮಹಾಲಕ್ಷ್ಮೀ ಲೇಔಟ್ ಬೆಂಗಳೂರು ಉತ್ತರ. | 44 | ಸದಸ್ಯರು | ವೈದ್ಯರು | Sujeet Kumar |  |
| 10. | ಡಾ. ಪ್ರಶಾಂತ ಅಣ್ಣಪ್ಪ ಕರಣಿ #ಎ/13/10, ಜೆ. ಎನ್. ಎಮ್. ಸಿ ಸ್ಟಾಫ್ ಕ್ವಾಟರ್ಸ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ ತಾ:ಜಿ:ಬೆಳಗಾವಿ. | 42 | ಸದಸ್ಯರು | ವೈದ್ಯರು | |  |
| 11. | ಡಾ. ಮುಕುಂದ ಅನಂತ ಉಡಚಣಕರ ಆಂಜನೇಯ ಪ್ಲಾಟ್ ನಂ:37, ಸೆಕ್ಟರ್ ನಂ:03, ಬಿ. ಎಸ್. ಎನ್. ಎಲ್. ಟವರ್ ಎದುರು ಶಿವಬಸವನಗರ ಬೆಳಗಾವಿ. | 62 | ಸದಸ್ಯರು | ವೈದ್ಯರು | |  |

ಸಾಕ್ಷಿದಾರರ ಹೆಸರು, ವಿಳಾಸ ಮತ್ತು ಸಹಿ:

1. ಶ್ರೀ Shri M.S. Ganachari

2. ಶ್ರೀಮತಿ ಜ್ಯೋತಿ.ರಟ್ಟಿ JRatti

# ಕೆ. ಎಲ್. ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ & ರಿಸರ್ಚ ಅಲುಮ್ನಿ ಅಸೋಸಿಯೇಶನ್.

1st ಫ್ಲೋರ್, ಆಫೀಸ್ ಆಫ್ ದಿ ಡೈರಕ್ಟರ್, ಸ್ಟುಡೆಂಟ್ಸ್ ವೆಲ್ಫೇರ್ ಡಿಪಾರ್ಟಮೆಂಟ್, ಕೆ. ಎಲ್. ಇ ಅಕಾಡೆಮಿ ಆಪ್ ಹೈಯರ್ ಎಜ್ಯುಕೇಶನ್ & ರಿಸರ್ಚ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ. ಆಡಳಿತ ಮಂಡಳಿಯ ಯಾದಿ

| ನಂ | ಹೆಸರು ಮತ್ತು ವಿಳಾಸ | ವಯಸ್ಸು | ಹುದ್ದೆ | ಉದ್ಯೋಗ | ಸಹಿ |
|---|---|---|---|---|---|
| 1. | ಡಾ. ಕೋಠಿವಾಲೆ ವೀರಪ್ಪ ಅಣ್ಣಾಸಾಹೇಬ<br>ಹೌಸ್. ನಂ:673, ಸೆಕ್ಟರ್ ನಂ:13, ಟಿ. ವಿ. ಸೆಂಟರ್ ಬೆಳಗಾವಿ. | 61 | ಅಧ್ಯಕ್ಷರು | ವೈದ್ಯರು | |
| 2. | ಡಾ. ವಿಶ್ವನಾಥ ಮಲ್ಲಪ್ಪಾ ಪಟ್ಟಣಶೆಟ್ಟಿ<br>#ಎಲ್.ಐ.ಜಿ–198, ಮಹಾಂತೇಶ ನಗರ ಮಾಳ ಮಾರುತಿ ಎಕ್ಷಟೆನ್ಷನ್, ಬೆಳಗಾವಿ. | 42 | ಉಪಾಧ್ಯಕ್ಷರು | ವೈದ್ಯರು | |
| 3. | ಡಾ. ರಂಜಿತ ಕಾಂಗಲೆ<br>#101, ರವಿಶಂಕರ ಆರ್ಕೆಡ ಪ್ಲಾಟ್ ನಂ:10, ಸ್ಕೀಮ್ ನಂ:51, ಗಣೇಶಪುರ ರೋಡ ಗೂಡಶೆಡ್ ಸೆಂಟ್ರಲ್ ಸ್ಕೂಲ್ ಎದುರು ಲಕ್ಷ್ಮೀ ಟೆಕ್‌ಡಿ ಬೆಳಗಾವಿ. | 50 | ಕಾರ್ಯದರ್ಶಿ | ವೈದ್ಯರು | |
| 4. | ಡಾ. ಬಸವರಾಜ ಶಶಿಧರ ಮೊತಿಮಠ<br>#12, ವಾರ್ಡ ನಂ:53, ರಾಮತೀರ್ಥ ನಗರ ಬೆಳಗಾವಿ ತಾ:ಜಿ:ಬೆಳಗಾವಿ. | 39 | ಖಜಾಂಚಿ | ಫಿಸಿಯೋ ಥೆರಪಿಸ್ಟ್ | |
| 5. | ಡಾ. ಅಶೋಕ ಮಲ್ಲಪ್ಪ ಕಮತ<br>#33, ನೆಹರು ನಗರ ಜೆ. ಎನ್. ಎಮ್. ಸಿ. ಬೆಳಗಾವಿ ತಾ:ಜಿ:ಬೆಳಗಾವಿ. | 44 | ಸದಸ್ಯರು | ಪ್ರೋಫೇಸರ್ | |
| 6. | ಡಾ. ಅಪೇಕ್ಷಾ ಅಶೋಕ ಪೂಜಾರ<br>ಹೌಸ್. ನಂ:1568, ಮಾರುತಿ ಗಲ್ಲಿ ಅದಿತಿ ಅಪಾರ್ಟಮೆಂಟ್ ಬ್ಯಾಂಕ್ ಆಪ್ ಬರೋಡ ಹಿಂದೆ ಬೆಳಗಾವಿ ತಾ:ಜಿ:ಬೆಳಗಾವಿ. | 50 | ಸದಸ್ಯರು | ಪ್ರೋಫೇಸರ್ | |
| 7. | ಡಾ. ಅರುಣ ಮಲ್ಲಿಕಾರ್ಜುನ ಚೌಗಲೆ<br>ಎ. ಪಿ. ಎಮ್. ಸಿ. ರೋಡ ಆಜಮ್ ನಗರ ಪ್ಲಾಟ್ ನಂ:9, ಫ್ಲ್ಯಾಟ್ ನಂ:1, ವೈಷ್ಣವಿ ರೆಸಿಡೆನ್ಸಿ ಬೆಳಗಾವಿ ತಾ:ಜಿ:ಬೆಳಗಾವಿ. | | ಸದಸ್ಯರು | ವೈದ್ಯರು | |
| 8. | ಡಾ. ಹಸನ್ ಪಾಶಾ ಎನ್. ಶೋಲಾಪುರ್<br>ನಿಯರ್ ಶಿರೂರ ಚಾಳ ಬಿಂದರಗಿ ಓಣಿ ಗಣೇಶ ಪೇಠ ಹುಬ್ಬಳ್ಳಿ ಧಾರವಾಡ. | 43 | ಸದಸ್ಯರು | ಫಾರ್ಮಸಿ | |
| 9. | ಶ್ರೀ. ಸುಜೀತ ಕುಮಾರ ರಾಮ ಪ್ರೀತ ಶರ್ಮಾ<br>#22, 5ನೇ ಮೇನ್ ಶ್ರೀ ಕಂಠೇಶ್ವರ ನಗರ ಮಹಾಲಕ್ಷ್ಮೀ ಲೇಔಟ್ ಬೆಂಗಳೂರು ಉತ್ತರ. | 44 | ಸದಸ್ಯರು | ವೈದ್ಯರು | Sujeet kumar |
| 10. | ಡಾ. ಪ್ರಶಾಂತ ಅಣ್ಣಪ್ಪ ಕರಣಿ<br>#ಎ/13/10, ಜೆ. ಎನ್. ಎಮ್. ಸಿ ಸ್ಟಾಫ್ ಕ್ವಾಟರ್ಸ ಜೆ. ಎನ್. ಎಮ್. ಸಿ ಕ್ಯಾಂಪಸ್ ನೆಹರು ನಗರ ಬೆಳಗಾವಿ ತಾ:ಜಿ:ಬೆಳಗಾವಿ. | 42 | ಸದಸ್ಯರು | ವೈದ್ಯರು | |
| 11. | ಡಾ. ಮುಕುಂದ ಅನಂತ ಉಡಚಣಕರ<br>ಆಂಜನೇಯ ಪ್ಲಾಟ್ ನಂ:37, ಸೆಕ್ಟರ್ ನಂ:03, ಬಿ. ಎಸ್. ಎನ್. ಎಲ್. ಟವರ್ ಎದುರು ಶಿವಬಸವನಗರ ಬೆಳಗಾವಿ. | 62 | ಸದಸ್ಯರು | ವೈದ್ಯರು | |

ಸಾಕ್ಷಿದಾರರ ಹೆಸರು, ವಿಳಾಸ ಮತ್ತು ಸಹಿ:

1. ಶ್ರೀ Shri M.S. Ganachari
2. ಶ್ರೀಮತಿ ಜ್ಯೋತಿ ರಟ್ಟಿ Jrati